**ಅ.ದಾ. ನಂಃ 18-2017** **ಸಿ .ಡಬ್ಲ್ಯೂ. 1**

ಸಾಕ್ಷಿದಾರರ ಹೆಸರು ಕಲ್ಪನ ಎಸ್ ವಾಗ್ಮೋರೆ

ವಾಸ್ತವ್ಯ ಕಾರವಾರ

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 03-10-2018

***ಮುಂದುವರಿದ ಪಾಟೀ ಸವಾಲುಃ ಶ್ರೀ ಎ.ಎಸ್.ಟಿ ವಕೀಲರಿಂದಃ-***

ನ್ಯಾಯಲಯವು ನಿರ್ದೆಶಿಸಿದಂತೆ ಸ್ಥಳಕ್ಕೆ ಹೋಗಿ ನ್ಯಾಯಾಲಯದ ನಿರ್ದೇಶನಗಳ ಪ್ರಕಾರ ವರದಿ ಸಲ್ಲಿಸಬೇಕಾಗುತ್ತದೆ ಎಂದರೆ ಸರಿ. ನಾವು ಕೋರ್ಟ್ ಕಮೀಶನರ್ ಕೆಲಸ ಮಾಡಲು ಹೋದ ಆಸ್ತಿ ವಾದಿಯ ಆಸ್ತಿ ಮತ್ತು ಮನೆ ವಾದಿಯದ್ದು ಎಂದು ದೃಢಪಡಿಸಲು ಯಾವ ದಾಖಲಾತಿಗಳನ್ನು ಪಡೆದುಕೊಂಡಿದ್ದೀರಿ ಎಂದರೆ ಲಕ್ಷ್ಮಣ್ ನೀಲಕಂಠ ದೇಸಾಯಿಯವರು ನೀಡಿದ ದೃಢಿಕರಣ ಪತ್ರವನ್ನು ಪಡೆದೆವು ಎಂದು ನುಡಿಯುತ್ತಾರೆ. ಸದ್ರಿ ಪತ್ರವನ್ನು ನ್ಯಾಯಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ವಾದಿಯಿಂದ ಪಡೆದ ದೃಢಿಕರಣ ಪತ್ರ ಬಿಟ್ಟು ಬೇರೆ ಯಾವುದೇ ದಾಖಲಾತಿಯನ್ನು ನಾವು ಪಡೆದಿಲ್ಲ ಎಂದರೆ ಸರಿ. ದನದ ಕೊಟ್ಟಿಗೆ ವಾದಿಯದ್ದು ಎಂದು ಯಾವುದೇ ದಾಖಲಾತಿ ಪಡೆದಿಲ್ಲ ಎಂದರೆ ಸಾಕ್ಷಿಯು ಗ್ರಾಮಪಂಚಾಯತ್ ಅವರು ಕೊಟ್ಟಿಗೆ ವಿವರ ಗ್ರಾಮಪಂಚಾಯತ್ ಅವರ ಬಳಿ ಇರುವುದಿಲ್ಲ ಎಂದು ನಮಗೆ ಹಿಂಬರಹ ನೀಡಿದ್ದರು ಎಂದು ನುಡಿಯುತ್ತಾರೆ. ದನದ ಕೊಟ್ಟಿಗೆ ವಾದಿಯ ಮಾಲೀಕತ್ವದ್ದು ಎಂದು ದಾಖಲಾತಿಗಳ ಮೂಲಕ ದೃಢಿಕರಿಸದೆ ಅದರ ಬಗ್ಗೆ ವರದಿ ಸಲ್ಲಿಸಿದ್ದೀರಿ ಎಂದರೆ ವಾದಿಯು ನೀಡಿದ ದಾಖಲಾತಿಗಳನ್ನು ಬಿಟ್ಟು ಯಾವುದೇ ದಾಖಲಾತಿಗಳನ್ನು ಪಡೆದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ದನದ ಕೊಟ್ಟಿಗೆ ಸರ್ವೆ ನಂ 1272/25 ರಲ್ಲಿದೆ ಎಂದು ದೃಢಿಕರಿಸಲು ಯಾವುದೇ ಸರ್ವೆಯರ್ ಸಹಾಯ ಪಡೆದಿಲ್ಲ ಎಂದರೆ ಸರಿ. ದನದ ಕೊಟ್ಟಿಗೆ ಲಕ್ಷ್ಮಣ್ ನೀಲಕಂಠ ದೇಸಾಯಿಗೆ ಸಂಬಂಧಪಟ್ಟ ಬಗ್ಗೆ ದಾಖಲಾತಿಗಳನ್ನು ನೋಡದೆ ಅದು ನಿರ್ದಿಷ್ಟವಾಗಿ ಅವರದ್ದೇ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ.

ದಿಃ 01-07-2017 ರಂದು ನಾನು, ಎ.ಇ.ಇ, ಎಕ್ಸಿಕ್ಯೂಟೀವ್ ಇಂಜಿನೀಯರ್, ಆಯ್.ಆರ್.ಬಿ ಯ ಧಾರೇಶ್ವರ್ ಎಂಬುವ ವ್ಯಕ್ತಿ , ಮತ್ತು ವಾದಿ ಸ್ಥಳ ಪರಿಶೀಲನೆ ಮಾಡಿದ್ದು ಅದರ ಅಳತೆಗಾಗಿ ಮರುದಿನ ಮತ್ತೆ ಸ್ಥಳಕ್ಕೆ ಹೋಗಿದ್ದೆವು. ಮರುದಿನ ಸ್ಥಳಕ್ಕೆ ಅಳತೆಗೆ ಗಾಗಿ ಹೋಗುತ್ತೇವೆ ಎಂದು ಆಯ್.ಆರ್.ಬಿ ಅವರಿಗೆ ಲಿಖಿತವಾಗಿ ತಿಳಿಸಿರಲಿಲ್ಲ ಎಂದರೆ ಸರಿ. ದಿಃ 02-07-2017 ರ ನಂತರ ನಾನು ಸ್ಥಳಕ್ಕೆ ಭೇಟಿ ನೀಡಿಲ್ಲ. ಲಕ್ಷ್ಮಣ್ ನೀಲಕಂಠ ದೇಸಾಯಿಯವರು ದೃಢಿಕರಣ ಪತ್ರವನ್ನು ಯಾವ ದಿನ ನೀಡಿದರು ಎಂದರೆ ದಿಃ 04-08-2017 ಎಂದು ಎಂದು ಸಾಕ್ಷಿಯು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಮುಂದುವರಿದು ದಿಃ 02-08-2017

ರಂದು ನಾವು ವಾದಿಗೆ ಪತ್ರ ಬರೆದಿದ್ದು ವಾದಿಯು ಪತ್ರಕ್ಕೆ ಉತ್ತರವಾಗಿ ದಿಃ 04-08-2017 ರಂದು ಸದ್ರಿ ದೃಢಿಕರಣ ಪತ್ರವನ್ನು ನೀಡಿದ್ದಾರೆ ಎಂದು ನುಡಿಯುತ್ತಾರೆ. ದೃಢಿಕರಣ ಪತ್ರ ಪಡೆದ ಬಗ್ಗೆ ಯಾವುದೇ ದಾಖಲಾತಿ ಇಲ್ಲ ಎಂದರೆ ಅವರೇ ಸಹಿ ಮಾಡಿಕೊಟ್ಟ ದಾಖಲಾತಿ ಎಂದು ಸಾಕ್ಷಿಯು ನುಡಿಯುತ್ತಾರೆ.

ವಾದಿಯು ಯಾವುದೇ ದೃಢಿಕರಣ ಪತ್ರ ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ದಿಃ 03-07-2017 ರ ಕಾರ್ಯ ನಿರ್ವಾಹಕ ಇಂಜಿನೀಯರ್ ಅವರ ಪತ್ರ ತೋರಿಸುತ್ತಿದ್ದು ಅದರಲ್ಲಿ ದಿಃ 02-07-2017 ರಂದು ಅಳತೆಗಾಗಿ ದಾವಾ ಆಸ್ತಿಗೆ ಹೋಗಿದ್ದೆವು ಎಂದು ಎಲ್ಲಿಯೂ ನಮೂದಿಸಿಲ್ಲ ಎಂದರೆ ಸರಿ. ದಿಃ 01-07-2017 ರಂದು ದಾವಾ ಮನೆಯ ಪರಿಶೀಲನೆ ಮನೆಯ ಒಳಗಿನಿಂದ ಮಾಡಿದ್ದು ಎಂದರೆ ಸರಿ. ನಮ್ಮ ವರದಿಯಲ್ಲಿ ಎಷ್ಟು ಮಂಗಳೂರು ಹಂಚುಗಳು ಒಡೆದಿವೆ , ಎಷ್ಟು ಚೆನ್ನಾಗಿವೆ , ಎಷ್ಟು ಎ.ಸಿ ಶೀಟ್‌ಗಳು ಪಡೆದಿದೆ ಮತ್ತು ಎಷ್ಟು ಚೆನ್ನಾಗಿವೆ ಎಂದು ನಮೂದಿಸಿಲ್ಲ ಎಂದರೆ ಸರಿ. ನ್ಯಾಯಲಯದ ನಿರ್ದೇಶನದಂತೆ ಮನೆಗೆ ಹೋಗಿ ಮನೆಯನ್ನು ಪರಿಶೀಲಿಸಿ ಎಲ್ಲೆಲ್ಲಿ ಎಷ್ಟೆಷ್ಟು ಡ್ಯಾಮೇಜ್ ಆಗಿದೆ ವರದಿ ಸಲ್ಲಿಸಬೇಕಾಗಿತ್ತು ಎಂದರೆ ಸರಿ. ನ್ಯಾಯಲಯದ ನಿರ್ದೇಶನದಲ್ಲಿ ಈಗಾಗಲೇ ನೀಡಿದ ಹಣದಲ್ಲಿ ಆದ ರಿಪೇರಿ ಕೆಲಸದ ಬಗ್ಗೆ ಸಹ ವರದಿ ಸಲ್ಲಿಸಬೇಕು ಎಂದು ನಿರ್ದೇಶನ ಇತ್ತು ಎಂದರೆ ಸರಿ. ಸದ್ರಿ ನಿರ್ದೇಶನವನ್ನು ನಾವು ಪಾಲಿಸಿಲ್ಲ ಮತ್ತು ವರದಿ ಸಲ್ಲಿಸಿಲ್ಲ ಎಂದರೆ ಸರಿ. ನಾನು ಮನೆ ನೋಡಿದಾಗ ಅದು ಇನ್‌ಟ್ಯಾಕ್ಟ್ ಆಗಿತ್ತು ಮತ್ತು ಕೊಲ್ಯಾಪ್ಸ್ ಆಗುವ ಪರಿಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿ. ಸ್ಥಳ ಪರಿಶೀಲನೆಗೆ ಹೋದಾಗ ಮನೆಯ ಛಾಯಾ ಚಿತ್ರಗಳನ್ನು ತೆಗೆದುಕೊಂಡಿದ್ದೀರಾ ಎಂದರೆ ತೆಗೆದುಕೊಂಡಿದ್ದೇವೆ ಆದರೆ ಈಗ ನಮ್ಮ ಬಳಿ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಸಾಕ್ಷಿಗೆ ಈಗ 1 ಛಾಯಾ ಚಿತ್ರವನ್ನು ತೋರಿಸುತ್ತಿದ್ದು ಅದನ್ನು ಅವರು ತಾವು ಕಮೀಶನ್ ವರದಿಗಾಗಿ ಭೇಟಿ ನೀಡಿದ ಮನೆ ಎಂದು ಗುರುತಿಸುತ್ತಾರೆ. ಸಾಕ್ಷಿಯು ಮುಂದುವರಿದು ಮನೆ ಅದೇ ರೀತಿ ಇದ್ದು ಹಂಚುಗಳು ಅಲ್ಲಲ್ಲಿ ಒಡೆದಿದ್ದವು ಎಂದು ನುಡಿಯುತ್ತಾರೆ. ಸದ್ರಿ ಛಾಯಾ ಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಮನೆಯ ಮುಂಭಾಗದ ಗೋಡೆಗೆ ಅಲ್ಲಲ್ಲಿ ಬಿರುಕು ಬಿದ್ದಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ 3 ಛಾಯಾ ಚಿತ್ರಗಳನ್ನು ತೋರಿಸಿದ್ದು ಅದನ್ನು ಅವರು ಗುರುತಿಸಿದ್ದರಿಂದ ಸದ್ರಿ ಛಾಯ ಚಿತ್ರಗಳನ್ನು ಕ್ರಮವಾಗಿ ನಿಡಿ-2 ರಿಂದ ನಿಡಿ-4 ಎಂದು ಗುರುತಿಸಲಾಯಿತು. (ವಾದಿ ಪರ ವಕೀಲರು ಸದ್ರಿ ಛಾಯಾ ಚಿತ್ರಗಳು ಕಮೀಶನ್ ವರದಿಗಿಂತ ಮುಂಚೆ ದಾವೆಯನ್ನು ಸಲ್ಲಿಸುವಾಗ ಹಾಜರುಪಡಿಸಿದ ಛಾಯಾ ಚಿತ್ರಗಳು ಎಂದು ಆಕ್ಷೇಪಿಸಿದ್ದು ಸಾಕ್ಷಿಯು ಸದ್ರಿ ಮನೆಗೆ ಕಮೀಶನ್ ವರದಿಗಾಗಿ ಭೇಟಿ ನೀಡಿದ್ದರಿಂದ ಆಕೆ ಆ ಛಾಯಾ ಚಿತ್ರಗಳನ್ನು ಗುರುತಿಸಲು ಸರಿಯಾದ ವ್ಯಕ್ತಿಯಾದ ಕಾರಣ ಆಕ್ಷೇಪಣೆಯನ್ನು ತಳ್ಳಿಹಾಕಲಾಯಿತು) ಮನೆಗೆ ಕಲ್ಲಿನ ಕಂಬಗಳಿದ್ದು , ಮಣ್ಣಿನ ಗೋಡೆಗಳಿದ್ದು , ಮಡ್ ಪ್ಲಾಸ್ಟರ್ ಇತ್ತು ಎಂದರೆ ಸರಿ. ನನ್ನ ಪ್ರಕಾರ ಮನೆ ನಿರ್ಮಾಣವಾಗಿ ಸುಮಾರು 35 ರಿಂದ 40 ವರ್ಷಗಳು ಆಗಿವೆ ಎಂದರೆ ಸರಿ. ಮನೆ ಕಲ್ಲಿನ ಕಂಬಗಳಿದ್ದು , ಮಣ್ಣಿನ ಗೋಡೆಗಳಿದ್ದು , ಮಡ್ ಪ್ಲಾಸ್ಟರ್ ಇದ್ದರೆ ಸಾಮಾನ್ಯವಾಗಿ

ಬಿರುಕುಗಳು ಎಂದರೆ ಸಾಕ್ಷಿಯು ಹೇರ್ ಲೈನ್ ಬಿರುಕುಗಳು ಬರುತ್ತವೆ ಎಂದು ನುಡಿಯುತ್ತಾರೆ. ಹೇರ್ ಲೈನ್ ಬಿರುಕುಗಳು ರಿಪೇರಿ ಮಾಡದೇ ಹೋದರೆ ಅವು ದೊಡ್ಡದಾಗುತ್ತ ಹೋಗುತ್ತವೆ ಎಂದರೆ ಸರಿ. ನಾನು ಕಮೀಶನ್ ಕೆಲಸಕ್ಕೆ ಹೋದಾಗ ಮನೆಗೆ ಬೀಗ ಹಾಕಿತ್ತು, ನಾವು ಮನೆಗೆ ಹೋದಾಗ ಹಂಚಿಗೆ ಸಪೋರ್ಟ್‌ಗಾಗಿ ಹಾಕಿದ ರಿ-ಪರ್ಸ್ ಮತ್ತು ರಾಪ್ಟರ್ಸ್‌ಗಳು ಬಿದ್ದಿರಲಿಲ್ಲ ಎಂದರೆ ಸರಿ. ಅವು ಇಂಟ್ಯಾಕ್ಟ್ ಆಗಿದ್ದವು ಮತ್ತು ಮೂಲ ಪರಿಸ್ಥಿತಿಯಲ್ಲಿ ಇದ್ದವು ಎಂದರೆ ಸರಿ. ಸದ್ರಿ ರಿ-ಪರ್ಸ್ ಮತ್ತು ರಾಪ್ಟರ್ಸ್‌ಗಳನ್ನು ಅಂತಹ ಮನೆ ಕಟ್ಟಲು ಉಪಯೋಗಿಸಬಹುದು ಎಂದರೆ ಸರಿ. ಮನೆಯ ಬಾಗಿಲು ಮತ್ತು ಕಿಡಕಿಗಳು ಸುಸ್ಥಿತಿಯಲ್ಲಿದ್ದವು. ಫ್ಲೋರಿಂಗ್ ಸಹ ಸುಸ್ಥಿತಿಯಲ್ಲಿತ್ತು ಎಂದರೆ ಸರಿ.

(ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)*

*ಓ. ಹೇ. ಕೇ. ಸರಿ ಇದೆ.*

*ಹೆ. ಸಿವಿಲ್ ನ್ಯಾಯಾಧೀಶರು,* **ಕಾರವಾರ.**